ಅಸಲು ದಾವಾ ನಂ.02 /2025
ಪಿ.ಡಬ್ಲ್ಯು: 1

**ಸಾಕ್ಷಿಯನ್ನು ಇಂದು ದಿನಾಂಕ: 14.07.2025 ರಂದು ಕರೆಯಿಸಿ ಪ್ರಮಾಣೀಕರಿಸಲಾಯಿತು**
**ಪಾಟೀ ಸವಾಲು: ಶ್ರೀ. ಎ ಜಿ ಪಿ ,ರವರಿಂದ ಪ್ರತಿವಾದಿ ಪರವಾಗಿ**

ನಾನು ದಿ: 31.10.2005 ರಂದು ತುಂಗ ನರ್ಸಿಂಗ್ ಹೋಮ್ ಜಮಖಂಡಿಯಲ್ಲಿ ಜನಿಸಿದ ಕಾರಣ 3ನೇ ಪ್ರತಿವಾದಿಯು ನನ್ನ ಜನ್ಮ ದಿನಾಂಕ:31.10.2005 ಎಂದು ನಮೂದಿಸಿ ನನ್ನ ಜನ್ಮ ಪ್ರಮಾಣ ಪತ್ರವನ್ನು ನೀಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ವಿಷಯ ನನಗೆ ಗೊತ್ತಿದ್ದರೂ ಸಹ ಗೊತ್ತಿಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಈ ಮೇಲಿನ ವಿಷಯ ಗಮನಕ್ಕೆ ಇದ್ದರೂ ಸಹ ನಾನು 2 ನೇಪ್ರತಿವಾದಿಯ ಮುಂದೆ ಸುಳ್ಳು ಅರ್ಜಿಯನ್ನು ಅದರಂತೆ ಇದೇ ನ್ಯಾಯಾಲಯದಲ್ಲಿ ಕ್ರಿ.ಮಿಸ.195/2024 ರಲ್ಲಿ ನನ್ನ ಜನ್ಮ ದಿನಾಂಕ: 10.06.2005 ಎಂದು ನಮೂದಿಸಿ ಸುಳ್ಳು ಸಾಕ್ಷಿ ಪ್ರಮಾಣಪತ್ರವನುನ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಸರ್ಕಾರಿ ನೌಕರಿಯ ಪ್ರಯೋಜನೆಯನ್ನು ಪಡೆಯುವ ಸಲುವಾಗಿ ಸುಳ್ಳು ದಾವೆಯನ್ನು ಸಲ್ಲಿಸಿ ಸುಳ್ಳು ಸಾಕ್ಷಿ ಪ್ರಮಾಣಪತ್ರವನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು 2ನೇ ಪ್ರತಿವಾದಿ ಮುಂದೆ ಅರ್ಜಿ ಸಲ್ಲಿಸಿದಾಗ ಸದರಿಯವರು ನನಗೆ ಜಂಟಿ ವಿನಂತಿ ಮನವಿ ಕಾನೂನಿನ ನಿಬಂಧನೆಯಲ್ಲಿ ಒಳಪಟ್ಟಿರುತ್ತದೆ ಎಂದು ಹಿಂಬರಹ ನೀಡಿರುತ್ತಾರೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಅದೆ,

ಸಹಿ/-
**ಸಿವಿಲ್ ವ ಜೆ ಎಮ್ ಎಫ್ ಸಿ ನ್ಯಾಯಾಧೀಶರು,**
**ಬನಹಟ್ಟಿ**